# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 316/2019

ಪಾಟೀ ಸವಾಲು. ಆರೋಪಿ ಪರ ಟಿ ಎಸ್ ಪಿ ವಕೀಲರಿಂದಃ-

ನಮ್ಮ ಕಚೇರಿಯಲ್ಲಿ ಸರಕಾರದ ಆದೇಶದಂತೆ ನಿಯಮಾವಳಿಗಳು ತಿದ್ದುಪಡಿ ಆದರೆ ನಮ್ಮ ಗಮನಕ್ಕೆ ಬರುತ್ತದೆ ಎಂದರೆ ಸರಿ. ಆ ದಿನ ತುಂಗಭದ್ರ ಡ್ಯಾಂ ನ ಹಿಂಬದಿ ಪ್ರದೇಶದಲ್ಲಿ ನೀರು ಬಂದು ಜನ ವಸತಿ ಪ್ರದೇಶದಲ್ಲಿ ಮತ್ತು ಹೊಲಗಳಿಗೆ ನೀರು ಬಂದ ಬಗ್ಗೆ ಪರಿಶೀಲನೆ ಮಾಡಲು ನಾವು ಹಗರಿಬೊಮ್ಮನಹಳ್ಳಿಗೆ ಬಂದಿರುತ್ತೇವೆ. ನಮಗೆ ಆ ಬಗ್ಗೆ ನಮ್ಮ ಮೇಲಾಧಿಕಾರಿಯ ಆದೇಶ ಇರಲಿಲ್ಲ ಆದರೆ ಅದು ನಮ್ಮ ದಿನ ನಿತ್ಯದ ಕೆಲಸವಾಗಿರುತ್ತದೆ. ಯಾವದಾದರೂ ಪ್ರವಾಸ ಕೈಗೊಂಡಲ್ಲಿ ನಾವು ನಮ್ಮ ಕಚೇರಿಯ ನಿಯಮಾವಳಿಯ ಪುಸ್ತಕದಲ್ಲಿ ಬರೆದು ಹೋಗಬೇಕು ಎಂದರೆ ಸರಿಯಲ್ಲ. ನಾನು ಚಾಸಾ 5 ರಿಂದ 12 ರವರನ್ನು ನನ್ನ ಜೊತೆ ಪ್ರವಾಸಕ್ಕೆ ಬರಲು ತಿಳಿಸಲು ತಹಶೀಲ್ದಾರವರಿಗೆ ತಿಳಿಸಿದ್ದೆ. ನಾನು ಅವರಿಗೆ ಫೋನು ಮೂಲಕ ಮಾಹಿತಿ ತಿಳಿಸಿದ್ದೆ. ತಹಶೀಲ್ದಾರವರಿಗೆ ನಾನು ಫೋನು ಮೂಲಕ ತಿಳಿಸಿದ್ದೆ ಅಂತಾ ಹೆಳುವ ಮೊಬೈಲ್ ನಂಬರನ್ನು ನಾನು ನನ್ನ ಹೇಳಿಕೆಯಲ್ಲಿ ಬರೆದಿಲ್ಲ. ಆ ದಿನ ಹೊಸಪೇಟೆ ಕಚೇರಿಯನ್ನು ನಾವು ಬೆ 11.00 ಗಂಟೆಗೆ ಬಿಟ್ಟಿರುತ್ತೇವೆ. ಈ ವಿಚಾರವನ್ನು ನಾವು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ. ಹೊಸಪೇಟೆ ಯಿಂದ ಹಗರಿಬೊಮ್ಮನಹಳ್ಳಿಗೆ 1 ಗಂಟೆ ಸಮಯಕ್ಕೆ ಬಂದಿರುತ್ತೇವೆ. ನಾನು ಹೆಚ್ ಬಿ ಹಳ್ಳಿಗೆ ಬರುವ ಒಳಗಾಗಿ ಹೆಚ್ ಬಿ ಹಳ್ಳಿಯಲ್ಲಿ ಮೇಲೆ ಹೇಳಿದ ಅಧಿಕಾರಿಗಳು ಹಾಜರಿದ್ದರು. ನಾವು ಹೆಚ್ ಬಿ ಹಳ್ಳಿ ಯಿಂದ ತಂಬ್ರಹಳ್ಳಿಗೆ ಹೋಗಿರುತ್ತೇವೆ. ಹೆಚ್ ಬಿ ಹಳ್ಳಿ ಯಿಂದ ತಂಬ್ರಹಳ್ಳಿಗೆ ಹೋಗಲು ಅರ್ಧ ಗಂಟೆ ಸಮಯ ಬೇಕಾಯಿತು ಆ ರೀತಿ ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ. ತಂಬ್ರಹಳ್ಳಿಯಿಂದ ನಾನು ಮೊದಲು ಮುತುಕೂರಿಗೆ ಬೇಟಿ ನೀಡಿರುತ್ತೇವೆ. ತಂಬ್ರಹಳ್ಳಿಯಿಂದ ಮುತುಕೂರಿಗೆ ಎಷ್ಟು ಕಿಮೀ ಅಂತರವಿದೆ, ಮುತುಕೂರು ಗ್ರಾಮಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೇವೆ ಅಂತಾ ಹೇಳಲು ನನಗೆ ಬರುವುದಿಲ್ಲ. ಮುತುಕೂರು ಗ್ರಾಮದಲ್ಲಿ ಹಿನೀರು ಪ್ರದೇಶಕ್ಕೆ ಬರುವ ಹೊಲಗಳು ಪರಿಶೀಲನೆ ಮಾಡಿರುತ್ತೇವೆ ಅಲ್ಲಿನ ಹೊಲದ ಮಾಲೀಕರಿಗೆ ವಿಚಾರ ಮಾಡಿರುತ್ತೇವೆ ಅಲ್ಲಿ ಸುಮಾರು 20 ನಿಮಿಷ ಆಯಿತು. ಅದಕ್ಕೆ ಸಂಬಂದಿಸಿದ ವರದಿಯನು ನಾನು ತನಿಖಾದಿಕಾರಿಯ ಮುಂದೆ ಹಾಜರುಪಡಿಸಿಲ್ಲ, ಅಲ್ಲಿಂದ ನಾವು ಕಿತನೂರು ಗ್ರಾಮಕ್ಕೆ ಬಂದಿರುತ್ತೇವೆ. ಆಗ ಸಮಯ ಎಷ್ಟಾಯಿತು ಅಂತಾ ಹೇಳಲು ಬರುವುದಿಲ್ಲ ಕಿತನೂರು ಗ್ರಾಮದಲ್ಲಿ ಅರ್ಧ ಗಂಟೆ ಸಮಯ ಕಳೆದಿರುತ್ತೇವೆ. ಮುತುಕೂರುದಿಂದ ಕಿತನೂರು ಗ್ರಾಮ ಎಷ್ಟು ಕಿಮೀ ಅಂತರವಿದೆ ಅಂತಾ ನನಗೆ ಹೇಳಲು ಬರುವುದಿಲ್ಲ. ಆ ದಿನ ನಾವು ಎಲ್ಲಾ ಸರಕಾರಿ

ವಾಹನದಲ್ಲಿ ಹೋಗಿರುತ್ತೇವೆ ಖಾಸಗಿ ವಾಹನ ಯಾವುದೂ ಇರುವುದಿಲ್ಲ. ಆ ದಿನ ನಾವು 8 ಅಧಿಕಾರಿಗಳು ಇದ್ದೆವು, 8 ಬೇರೆ ಬೇರೆ ಸರಕಾರಿ ವಾಹನಗಳಲಿ ಹೋಗಿರುತ್ತೇವೆ, ಅವುಗಳ ನಂಬರ ನನಗೆ ಹೇಳಲು ಬರುವುದಿಲ್ಲ. ಕಿತನೂರು ಗ್ರಾಮದಿಂದ ಹಂಪಸಾಗರ ಗ್ರಾಮ ಎಷ್ಟು ಕಿಮೀ ಅಂತರವಿದೆ ನನಗೆ ಹೇಳಲು ಬರುವುದಿಲ್ಲ. ಕಿತನೂರು ಗ್ರಾಮದಿಂದ ಹಂಪಸಾಗರ ಗ್ರಾಮಕ್ಕೆ ಸುಮಾರು 20 ನಿಮಿಷದಲ್ಲಿ ಹೋಗಿರುತ್ತೇವೆ. ಆ ಸಮಯದಲ್ಲಿ ರಸ್ತೆಗಳು ಹಾಳಾಗಿತ್ತು ಎಂದರೆ ಸರಿಯಲ್ಲ. ಹಳ್ಳಿ ರಸ್ತೆಗಳು ಕಿರಿದಾಗಿರುವುದರಿಂದ ಮತ್ತು ಅಕ್ಕ ಪಕ್ಕ ತಿಪ್ಪೆಗಳು ಇರುವುದರಿಂದ ನಮಗೆ 20 ನಿಮಿಷಗಳಲ್ಲಿ ಹಂಪಸಾಗರ ಗ್ರಾಮಕ್ಕೆ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕಿತನೂರುನಿಂದ ಹಂಪಸಾಗರ ಗ್ರಾಮ ಸುಮಾರು 30-35 ಕಿಮೀ ಅಂತರದಲ್ಲಿ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಮಾನ್ಯವಾಗಿ ಅತಿವೃಷ್ಟಿ ಅನಾವೃಷ್ಟಿ ಆದಾಗ ಅಲ್ಲಿ ಸಮಸ್ಯೆಗಳು ಆಗಿರುವುದರಿಂದ ಬಹಳಷ್ಟು ಜನ ಕೂಡಿರುತ್ತಾರೆ ಎಂದರೆ ಸಾಕ್ಷಿಯ ಆ ದಿನ ಅಲ್ಲಿ ಯಾವುದೇ ಅತಿವೃಷ್ಟಿ ಅನಾವೃಷ್ಟಿ ಆಗಿರುವುದಿಲ್ಲ ಮತ್ತು ಅಷ್ಟು ಜನಗಳು ಅಲ್ಲಿ ಸೇರಿರುವುದಿಲ್ಲ ಅನ್ನುತ್ತಾರೆ. ಆ ದಿನ ನಮ್ಮ ಜೊತೆ ಸಂಪೂರ್ಣ ತಾಲೂಕ ಆಡಳಿತ ಇತ್ತು ಆದರೆ ಪೋಲೀಸ ಇಲಾಖೆಯವರು ಯಾರು ಇರಲಿಲ್ಲ. ಆ ದಿನ ನಾವು ಬೇಟಿಗೆ ಹೋದಾಗ ಪೋಲೀಸ ಇಲಾಖೆಗೆ ಮಾಹಿತಿ ಕೊಟ್ಟಿಲ್ಲ. ನಾನು ಪೋಲಿಸ ಇಲಾಖೆಗೆ ಮಾಹಿತಿ ಕೊಟ್ಟಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಂಪೂರ್ಣ ತಾಲೂಕ ಅಡಳಿತ ಮತ್ತು ಮೇಲಾಧಿಕಾರಿಗಳು ಹೋಗಬೇಕಾದರೆ ಪೋಲೀಸ ರಕ್ಷಣೆಯನ್ನು ತೆಗೆದುಕೊಂಡು ಹೋಗುವ ಬಗ್ಗೆ ನಿಯಮಾವಳಿ ಇದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಆಹಾರ ಇಲಾಖೆಗೆ ಸಂಬಂದಿಸಿದಂತೆ ನಿಯಮಾವಳಿಗಳು ಬದಲಾದರೆ ಅದು ನಮ್ಮ ಗಮನಕ್ಕೆ ಬರುತ್ತದೆ ಎಂದರೆ ಸರಿ. ಸನ್ 2014 ರ ನಂತರದಲ್ಲಿ ದಾಸ್ತಾನು ರಿಜಿಸ್ಟರ್ ಮತ್ತು ದಾಸ್ತಾನು ವಹಿಗಳನ್ನು ತೆಗೆದು ಹಾಕಿ ಅವುಗಳನ್ನು ಆನ್ಲೈನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೇಳಿಕೆ ಜೊತೆ ದಾಸ್ತಾನು ವಹಿ ಮತ್ತು ವಿತರಣ ವಹಿಗಳನ್ನು ಈಗಲೂ ಸಹ ಮುಂದುವರೆಸಿರುತ್ತಾರೆ ಅನ್ನುವ ಬಗ್ಗೆ ಅದರ ಪ್ರತಿಯನ್ನು ನಾನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿಲ್ಲ. ಹಂಪಸಾಗರ ಗ್ರಾಮದಲ್ಲಿ ನಾವು ಸುಮಾರು 20 ನಿಮಿಷದ ವರೆಗೆ ಪರಿಶೀಲನೆ ಮಾಡಿರುತ್ತೇವೆ. ಅಲ್ಲಿಯೂ ಸಹ ಹೊಲ ಗದ್ದೆಗಳನ್ನು ಪರಿಶೀಲನೆ ಮಾಡಿರುತ್ತೇವೆ ಅಲ್ಲಿ 20 ನಿಮಿಷ ಸಮಯ ಬೇಕಾಯಿತು. ಅಲ್ಲಿ ನಾವು ನ್ಯಾಯಬೆಲೆ ಅಂಗಡಿಗೆ ಮದ್ಯಾಹ್ನ 3.00 ಗಂಟೆ ಸಮಯಕ್ಕೆ ಹೋಗಿರುತ್ತೇವೆ. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸನ್ 2014 ರಿಂದ ಆನ್ಲೈನ್ ಅಲ್ಲಿ ರಶೀದಿ ಬಂದ ನಂತರ ಪಡಿತರ ಆಹಾರವನು ವಿತರಣೆ ಮಾಡುವ ನಿಯಮ ಇದೆ ಅಂದರೆ ಸಾಕ್ಷಿಯು ಆ ಸಮಯದಲ್ಲಿ ಇರಲಿಲ್ಲ ಈಗ ಇದೆ ಎನ್ನುತ್ತಾರೆ . ಆ ಸಮಯದಲ್ಲಿ ಆ ರೀತಿ ನಿಯಮ ಇರಲಿಲ್ಲ ಅಂತಾ ತೋರಿಸಲು ನಾನು ನನ್ನ ಹೆಳಿಕೆಯ ಜೊತೆ ತನಿಖಾದಿಕಾರಿಗಳ ಮುಂದೆ ದಾಖಲೆಯನ್ನು ಹಾಜರು ಪಡಿಸಿಲ್ಲ. ನನ್ನ

ವಾಹನದಲ್ಲಿ ಆ ದಿನ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ನನ್ನ ಜೊತೆ ಆ ದಿನ ನನ್ನ ಸಿಬ್ಬಂದಿ ಯಾರು ಇರಲಿಲ್ಲ ಚಾಲಕ ಮಾತ್ರ ಇದ್ದ. ಆ ದಿನ ನ್ಯಾಯಾಬೆಲೆ ಅಂಗಡಿಗೆ ಮೊದಲು ಯಾರು ಹೋದರಿ ಎಂದರೆ ಸಾಕ್ಷಿಯು ಎಲ್ಲಾ ಅಧಿಕಾರಿಗಳು ಒಟ್ಟಿಗೆ ಹೋದೆವು ಎನ್ನುತ್ತಾರೆ. ನಾನು ಸದರಿ ಅಂಗಡಿಯಲ್ಲಿ ಅಂಗಡಿಯ ಮಾಲೀಕನಿಗೆ ವಿಚಾರಿಸಿ ದಾಸ್ತಾನು ವಹಿ ಮತ್ತು ವಿತರಣಾ ವಹಿಯನ್ನು ಕೇಳಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಅಹಾರ ಶಿರಸ್ತೇದಾರರು ಇದ್ದರು. ಈ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಬರೆಸಿದ್ದೇನೆ. ಸದರಿ ನ್ಯಾಯಬೆಲೆ ಅಂಗಡಿಯ ಚೆಕ್ಕುಬಂದಿ ಸಂಪೂರ್ಣ ನನಗೆ ಹೇಳಲು ಬರುವುದಿಲ್ಲ. ಆದರೆ ಉತ್ತರಕ್ಕೆ ರಸ್ತೆ ಇದೆ . ಆದ್ದರಿಂದ ನನಗೆ ಆ ಅಂಗಡಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ಅಂಗಡಿಯಲ್ಲಿ ಅಕ್ಕಿ ಚೀಲಗಳು ಇದ್ದವು ಅವು ಎಷ್ಟು ಇದ್ದವು ಎಂದರೆ ನನಗೆ ನೆನಪಿಲ್ಲ, ತೂಕ ಯಂತ್ರ ಮತ್ತು ಬಿಲ್ ಬುಕ್ ಇದ್ದವು. ಇದನ್ನು ಹೊರತುಪಡಿಸಿ ಅಲ್ಲಿ ಏನೂ ಇರಲಿಲ್ಲ. ಆಹಾರ ಶಿರಸ್ತೇದಾರರು ಮತ್ತು ನ್ಯಾಯಬೆಲೆ ಅಂಗಡಿಯ ಮಾಲೀಕ ಪರಿಚಯಸ್ತರು ಎಂದರೆ ನನಗೆ ಮಾಹಿತಿ ಇಲ್ಲ. ನ್ಯಾಯಬೇಲೆ ಅಂಗಡಿಗೆ ಸಂಬಂದಿಸಿದಂತೆ ಆಹಾರ ವಿತರಣೆಯ ಕುರಿತು ವಹಿಗಳನ್ನು 15 ದಿನ ಅಥವಾ ತಿಂಗಳಿಗೆ ಒಮ್ಮೆ ಆಹಾರ ಶಿರಸ್ತೇದಾರರು ಪರಿಶೀಲನೆ ಮಾಡುತ್ತಾರೆ ಎಂದರೆ ಸರಿ. ಹಂಪಸಾಗರ ಸಮುದಾಯ ಭವನದ ಬಳಿ ಹೋದಾಗ ಅಲ್ಲಿ ಸುಮಾರು 25 ಜನ ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಆಹಾರ ವಿತರಣೆಗೆ ಸಂಬಂದಿಸಿದಂತೆ ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. ಅದರ ಮೇಲೆ ಪೊಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಈ ಮಾತನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ. ನ್ಯಾಯಬೆಲೆ ಅಂಗಡಿಯ ನಂಬರು ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳೀಕೆಯಲ್ಲಿ ಹೇಳಿರುವಂತಹ ಎಲ್ಲಾ ಹೇಳಿಕೆಗಳು ಸುಳ್ಳಿನಿಂದ ಕೂಡಿರುತ್ತವೆ ಅದು ಕಟ್ಟು ಕಥೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮೇಲಾಧಿಕಾರಿಗಳು ಬಂದಲ್ಲಿ ಆ ಸ್ಥಳದಲ್ಲಿರುವವರು ಅವರಿಗೆ ಗೌರವ ನೀಡುವ ವಾಡಿಕೆ ಇದೆ ಎಂದರೆ ಸರಿ. ಆರೋಪಿತರು ನಮಗೆ ಯಾವುದೇ ಅವಾಚ್ಯ ಶಬ್ದದಿಂದ ಬೈದಿಲ್ಲ, ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ನಿರ್ದೇಶನದಂತೆ ದೂರುನ್ನು ತಯಾರಿಸಿ ಠಾಣೆಗೆ ನೀಡಲಾಗಿದೆ ಎಂದರೆ ಸಾಕ್ಷಿಯು ದೂರು ದಾಖಲಿಸಲು ನಾನು ನಿರ್ದೇಶನ ನೀಡಿದ್ದೇನೆ ಎನ್ನುತ್ತಾರೆ. ಇದೇ ರೀತಿ ದೂರನ್ನು ನೀಡಬೇಕು ಅಂತಾ ನಾನು ನಿರ್ದೇಶನ ನೀಡಿದ್ದೇನೆ ಅಂದರೆ ಸಾಕ್ಷಿಯು ನಾನು ಘಟನಾವಳಿಯನ್ನು ವಿವರಿಸಿ ದೂರು ನೀಡಲು ನಿರ್ದೇಶನ ನೀಡಿರುತ್ತೇನೆ ಅನ್ನುತ್ತಾರೆ. ಆ ದಿನ ಪೋಲೀಸರಿಗೆ ನಾನೇ ಪೋನು ಮಾಡಿದ್ದೇನೆ. ನಾನು ನೇರವಾಗಿ ಪಿ ಎಸ್ ಐ ಅವರಿಗೆ ಪೋನು ಮಾಡಿರುತ್ತೇನೆ. ದೂರು ಎಲ್ಲಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಪಿಎಸ್ ಐ

ಅವರನ್ನು ಸ್ಥಳದಲ್ಲಿ ಕರೆಯಿಸಿ ದೂರು ಕೊಟ್ಟಿರುತ್ತೇವೆ ಎನ್ನುತ್ತಾರೆ. ಆರೋಪಿತರು ಯಾವುದೇ ತಪ್ಪನ್ನು ಮಾಡಿಲ್ಲ, ನಾನು  ಆಹಾರ ಶಿರಸ್ತೇದಾರರ ಮೂಲಕ ಒಂದು ಸುಳ್ಳು ದೂರನ್ನು ಆರೋಪಿತರ ವಿರುದ್ದ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಧಿಕಾರಿಯ ಜೊತೆ ಅಸಭ್ಯವಾಗಿ ವರ್ತಿಸಿಲ್ಲ, ಯಾವುದೇ ರೀತಿಯಿಂದ ಅವಾಚ್ಯವಾಗಿ ಬೈದಿರುವುದಿಲ್ಲ, ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ, ಯಾವುದೇ ರೀತಿಯ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ, ಅವರ ವಿರುದ್ದ ಒಂದು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ